ಶ್ರೀ ಯು. ಭೂಪತಿ.—ನನಗೆ ಕೊಟ್ಟಿರುವ ಉತ್ತರ ಬೇರೆ, ಅವರಿಗೆ ಕೊಟ್ಟಿರುವ ಉತ್ತರ ಬೇರೆ. ಎರಡೂ ಒಂದೇ ಅಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ —ಮಾನ್ಯ ಸದಸ್ಯರು ಆಬ್ಸೆಂಟ್ ಇದ್ದರು. ಪುನಃ ಅದೇ ಪ್ರಶ್ನೆಗೆ ಸಮಯ ತೆಗೆದುಕೊಳ್ಳುವುದು ಒಳ್ಳೆಯದಲ್ಲ.

ಶ್ರೀ ಯು. ಭೂಪತಿ —ನನ್ನ ಪ್ರಶ್ನೆ.....

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. Nothing will go on record. ಮಾನ್ಯ ಕೃಷ್ಣನ್ ಅವರೇ ನೀವು ಸರಿಯಾಗಿ ಗೈಡ್ ಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಅವಗಿಗೆ ಅವಕಾಶ ಮಾಡಿಕೊಡಿ.

ಪ್ರಕಟಣೆಗಳು

ಅಧ್ಯಕ್ಷರು.—ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಈ ಕೆಳಕಂಡ ವಿಧೇಯಕಗಳನ್ನು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

೧) ೧೯೮೭ನೇ ಇಸವಿಯ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ.

೨) ೧೯೮೭ನೇ ಇಸವಿಯ ಅಬಕಾರಿ (ಎರಡನೇ ತಿದ್ದುಪಡಿ) ವಿಧೇಯಕ.

೩) ೧೯೮೭ನೇ ಇಸವಿಯ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕ.

ಪ್ರಕಟಣೆ–೨

———

ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ಕೋಲಾರ, ಇವರಿಂದ ಈ ಕೆಳಕಂಡ ಸಂದೇಶ ನನಗೆ ಬಂದಿದೆ.

ವಿಧಾನಸಭಾ ಸದಸ್ಯರಾದ ಶ್ರೀ ಆರ್. ವೆಂಕಟರಾಮಯ್ಯನವರನ್ನು ದಂಡ ಪ್ರಕ್ರಿಯಾ ಸಂಹಿತೆಯ ೧೫೧ನೇ ಕಲಮಿನ ಮೇರೆಗೆ ಮುಳಬಾಗಿಲಿನಲ್ಲಿ ದಿನಾಂಕ ೯ನೇ ಸೆಪ್ಟೆಂಬರ್ ೧೯೮೭ರಂದು ಮಧ್ಯಾಹ್ನ ೧೨–೩೦ ಗಂಟೆಗೆ ಬಂಧಿಸಿ ಮುಳಬಾಗಿಲು ಆರಕ್ಷಕ ಠಾಣೆಯಲ್ಲಿಟ್ಟುಕೊಂಡು ನಂತರ ಅದೇ ದಿನ ಮಧ್ಯಾಹ್ನ ೨–೧೦ಕ್ಕೆ ಬಿಡುಗಡೆ ಮಾಡಲಾಯಿತು.

ವರದಿ ಸಲ್ಲಿಸಲು ಕಾಲಾವಧಿ ವಿಸ್ತರಣೆಯ ಪ್ರಸ್ತಾವ

೧೯೮೬ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿ ವರದಿ ಸಲ್ಲಿಸಲು ಕಾಲಾವಕಾಶ ವಿಸ್ತರಿಸುವ ಬಗ್ಗೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ೧೯೮೬ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿ ವರದಿಯನ್ನು ಸಲ್ಲಿಸಲು ೧೯೮೮ರ ಜನವರಿ ಅಂತ್ಯದವರೆಗೆ ಕಾಲಾವಧಿ ವಿಸ್ತರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಮಂಡಿಸಲಾಗಿದೆ. ಪ್ರಸ್ತಾವ ಹೀಗಿದೆ.

"೧೯೮೬ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿ ವರದಿಯನ್ನು ಸಲ್ಲಿಸಲು ೧೯೮೮ರ ಜನವರಿ ಅಂತ್ಯದವರೆಗೆ ಕಾಲಾವಧಿ ವಿಸ್ತರಿಸಬೇಕು."

ಪ್ರಸ್ತಾವಕ್ಕೆ ಅಂಗೀಕಾರ ದೊರಕಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ೧೯೭೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ೪೫ (೨)ನೇ ಕಲಮಿನ ಮೇರೆಗೆ ೧೯೮೫-೮೬ನೇ ಇಸವಿಯ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ಗಮನ ಸೆಳೆಯುವ ಸೂಚನೆ

ಕೆ.ಜಿ.ಎಫ್. ನಲ್ಲಿ ಇಬ್ಬರ ಕೊಲೆಯಾಗಿರುವುದರ ಬಗ್ಗೆ

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅದಕ್ಕಿಂತ ಮುಂಚಿತವಾಗಿ ನಿನ್ನೆ ನಡೆದಂತಹ ವಿಷಯದ ಬಗ್ಗೆ ಸದನದ ಸಮಿತಿಯನ್ನು ಮಾಡುವ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರೆಂದು ಹೇಳಿದ್ದೀರಿ.

ಅಧ್ಯಕ್ಷರು.—ಆ ಬಗ್ಗೆ ನಾಳೆ ಚರ್ಚೆಗೆ ಅವಕಾಶ ಮಾಡಿಕೊಡಲಾಗಿದೆ. ನಾಳೆ ಮಾತನಾಡಿ. ಮಾನ್ಯ ಶ್ರೀ ಟಿ. ಎಸ್. ಮಣಿಯವರೇ, ತಾವು ಗೃಹ ಮಂತ್ರಿಗಳ ಗಮನವನ್ನು ಸೆಳೆಯಲಿ.

ಶ್ರೀ ಯಂ. ಭೂಪತಿ —ಗೃಹ ಮಂತ್ರಿಗಳೇ ಇಲ್ಲಿ ಇಲ್ಲವಲ್ಲಾ, ನಾವು ಯಾರ ಗಮನವನ್ನು ಸೆಳೆಯಬೇಕು ? ನಿಮ್ಮ ಗಮನವನ್ನು ಸೆಳೆಯಬೇಕೇ ?

ಶ್ರೀ ಎಂ. ರಘುಪತಿ.—ನಾನು ಇದ್ದೇನೆ. ಇದು ಜಾಯಿಂಟ್ ರೆಸ್‌ಪಾನ್ಸಿಬಿಲಿಟಿ.

ಶ್ರೀ ಯಂ. ಭೂಪತಿ.—ಆ ರೀತಿ ಜಂಟಿ ಜವಾಬ್ದಾರಿ ಕೇವಲ ಸಂಸದೀಯ ವ್ಯವಹಾರಗಳ ಸಚಿವರಿಗೆ ಮಾತ್ರ ಇರುತ್ತದೆ. ನಿಮಗೆ ಯಾವ ರೀತಿ ಬರುತ್ತದೆ ?

ಶ್ರೀ ಎಂ. ರಘುಪತಿ.—ನೀವು ಹೊಸಬರು ಇದ್ದೀರಿ. ಕಲಿತುಕೊಳ್ಳಿ.

ಶ್ರೀ ಯಂ. ಭೂಪತಿ.—ನಿಮ್ಮಿಂದ ಕಲಿತುಕೊಳ್ಳಬೇಕಾಗಿಲ್ಲ.

ಶ್ರೀ ಎಂ. ರಘುಪತಿ (ಗೃಹ ಮಂತ್ರಿಗಳ ಪರವಾಗಿ).— ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

It is a fact that one case of murder in June and another case of murder in July 1987 are reported from K.G.F. However, the facts and circumstances of the occurrence of these two murders were such that they have not caused any great fear in the minds of the public. More-over the Police have taken prompt action in registering the cases and investigating and apprehending the culprits concerned. The facts of the two cases are as follows :—

1. on 5-6-1987 at about 8 . p. m. the accused persons (1) Murugesh S/o Arumugham, 2) Thirumalai Nambi and 3) Deva @